ಕಮೀಷನರ್‌ರವರಿಂದ ವರದಿ ತರಿಸಿಕೊಂಡು ಅಲ್ಲಿರುವ ಸೇಂದಿವನ ಇವು ಸಾಮಾನ್ಯವಾಗಿ ರೆವಿನ್ಯೂ ಲೆಕ್ಕದಲ್ಲಿ ಇರುತ್ತವೆ, ಈಗ ಆ ವನಗಳು ಏನಾದರೂ ಉಳಿದಿವೆಯೇ? ಮೇಲಾಗಿ ಸೇಂದಿಮರವನ್ನು ಹತ್ತಿ ಕಟ್ಟುವವರೇ ಇಲ್ಲ. ಮೊದಲು ಎಷ್ಟು ವೇಗವಾಗಿ ಮತ್ತು ಎಫಿಷಿಯಂಟ್ ಆಗಿ ಮರ ಹತ್ತಿ ಕಟ್ಟುತ್ತಿದ್ದರು, ಇಳಿಯುತ್ತಿದ್ದರು, ಈಗ ಏನಾಗಿದೆ ಮರ ಹತ್ತಿ ಬೀಳುವವರೇ ಜಾಸ್ತಿ ಜನ ಇದ್ದಾರೆ.

(ಇ) ಬೀಳಗಿ ತಾಲ್ಲೂಕಿನ ಹೇರಕಲ್ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಆ ಶಾಲೆಯ ಶಿಕ್ಷಕರೊಬ್ಬರು ಅಪಮಾನ ಮಾಡಿರುವುದು.

ಶ್ರೀ ರಾಜಶೇಖರ ಶೀಲವಂತ (ಗುಳೇದ ಗುಡ್ಡ): ಅಧ್ಯಕ್ಷರೆ, ಬೀಳಗಿ ತಾಲ್ಲೂಕಿನ ಹರಕೆರೆ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿಯ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಮುಗಿಸಿ ಊರಿನ ವಿಷಯಕ್ಕೆ ಸಂಬಂಧಿಸಿದಂತೆ ಊರಿನ ಜನತೆ ಹಾಗೂ ಶಿಕ್ಷಕರು ಚರ್ಚೆ ಮಾಡಿದಾಗ, ಶಾಲೆಯಲ್ಲಿ ಸರಿಯಾದ ವಿದ್ಯಾಭ್ಯಾಸ ನಡೆದಿಲ್ಲ, ಶಾಲೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ಕಾರಣಕ್ಕಾಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಗ್ರಾಮಸ್ಥರಿಗೆ ಕೂಡ ತೊಂದರೆಯಾಗಿದೆ ಎನ್ನತಕ್ಕಂಥ ವಿಷಯವನ್ನು ಗ್ರಾಮದ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿರುವ ಮಾನ್ಯ ಸಂಗಮೇಶ್ ಭಗವತಿಯವರು ಪ್ರಸ್ತಾಪ ಮಾಡಿದಾಗ, ಆ ಶಾಲೆಯ ಟೀಚರ್ ಆಗಿರುವ ಟಿ.ವೈ.ಜಾನಮಟ್ಟಿಯವರು, ಅವರ ಜೊತೆ ಕೋಪಗೊಂಡು ತುಂಬಾ ಕೆಟ್ಟದಾಗಿ ನಡೆದುಕೊಂಡರು ಹಾಗೂ ಎಲ್ಲಾ ಮಹಾಜನಗಳ ಮುಂದೆ ಅಪಮಾನವನ್ನೂ ಕೂಡ ಮಾಡಿದ್ದಾರೆ. ನಂತರ ಅಲ್ಲಿರುವ ಊರಿನ ಹಿರಿಯರು ಅವರೇ ಕುಳಿತುಕೊಂಡು ಅಪಮಾನಕ್ಕೆ ಒಳಗಾದವರನ್ನು ಸಮಾಧಾನ ಮಾಡುವಂತಹ ಕೆಲಸವನ್ನೂ ಕೂಡ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಆ ಶಿಕ್ಷಕ ತನ್ನ ಹತ್ತಿರ ಒಂದು ಬಂದೂಕು ಕೂಡ ಇಟ್ಟುಕೊಂಡಿದ್ದಾನೆ. ಇಲ್ಲಿ ಒಂದು ವಿಚಿತ್ರವಾದ ಸಂಗತಿ ಏನೆಂದರೆ ಆ ಶಿಕ್ಷಕ ಏಕೆ ಬಂದೂಕು ಇಟ್ಟುಕೊಂಡಿದ್ದಾನೆ ಎಂಬುದು ನಮಗೆ ಗೊತ್ತಿಲ್ಲ. ಆ ಬಂದೂಕನ್ನೇ ಆಧಾರವಾಗಿ ಇಟ್ಟುಕೊಂಡು ತಾಲ್ಲೂಕು ಪಂಚಾಯಿತಿಯ ಸದಸ್ಯರ ಮೇಲೆ ಆಕ್ರಮಣ ಮಾಡುವುದಕ್ಕೆ ಬಂದಾಗ, ಅಲ್ಲಿದ್ದ ಗ್ರಾಮದ ಹಿರಿಯ ಮುಖಂಡರು ಅವರಿಗೆ ಸಮಾಧಾನ ಮಾಡಿ ಹೇಳಿ ಕಳುಹಿಸಿದ್ದಾರೆ. ನಂತರ ಅದೇ ದಿನ ಸಂಜೆ ಸುಮಾರು 5-00 ಗಂಟೆಗೆ ಹೆರಕಲ್ ಗ್ರಾಮದ ಬಳಿಯಿರುವ ಹೆರಕಲ್ ಪುನರ್‌ವಸತಿ ಕೇಂದ್ರಕ್ಕೆ ತನ್ನ ಸಂಬಂಧಿಗಳನ್ನು ಕರೆದುಕೊಂಡು ಹಾಗೂ ತನ್ನ ಹಿಂಬಾಲಕರನ್ನು ತನ್ನದೇ ಆದ ಒಂದು 709ನೇ ನಂಬರಿನ ಟ್ರಕ್‌ನಲ್ಲಿ ಬಂದು, ಜೊತೆಗೆ ತಾನೂ ಕೂಡ ಮೋಟಾರ್ ಸೈಕಲ್‌ನಲ್ಲಿ ಬಂದೂಕನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು, ಮಾರಕ ಅಸ್ತ್ರಗಳನ್ನು ತೆಗೆದುಕೊಂಡು ಬಂದು ಗ್ರಾಮದಲ್ಲಿ ಗಲಾಟೆ ಮಾಡಿದಾಗ, ಇಡೀ ಊರಿನ ಜನತೆ ಎಲ್ಲರೂ ಸಹ ಬಾಗಿಲು ಮುಚ್ಚಿ ಕುಳಿತುಕೊಳ್ಳುವ ಪರಿಸ್ಥಿತಿ ಉಂಟಾಯಿತು. ಇಷ್ಟೆಲ್ಲಾ ಆದರೂ ಕೂಡ ಶಾಲೆಯ ಬಗ್ಗೆ ಮಾತನಾಡುವ ಯಾರಾದರೂ ಗಂಡು ಮಕ್ಕಳಿದ್ದರೆ ಹೊರಗೆ ಬನ್ನಿ,

ನಿಮ್ಮನ್ನು ಹೊಡೆಯುತ್ತೇನೆ, ಬಡಿಯುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಆರ್ಭಟಿಸುತ್ತಾ, ಜನರನ್ನು ರೊಚ್ಚಿಗೆಬ್ಬಿಸಿರುವುದರಿಂದ ಇಡೀ ಊರಿನ ಜನತೆಯಲ್ಲಿ ಭಯದ ವಾತಾವರಣ ಉಂಟಾಗಿದೆ. ಇದೇ ಕಾರಣಕ್ಕಾಗಿ ಆ ಭಾಗದ ಸುಮಾರು 15-20 ಜನರು ನನ್ನ ಬಳಿ ಬಂದಿದ್ದರು, ಅವರನ್ನೂ ಕೂಡ ಮಾನ್ಯ ಗೋವಿಂದೇಗೌಡರಿಗೆ ಭೇಟಿ ಮಾಡಿಸಿ, ಆ ಶಿಕ್ಷಕನ ಮೇಲೆ ಕ್ರಮ ಜರುಗಿಸಲಿಕ್ಕೆ ಈಗಾಗಲೇ ತಿಳಿಸಲಾಗಿದೆ. ಆದರೆ ನಾನು ಮುಖ್ಯವಾಗಿ ಹೇಳುವುದೇನೆಂದರೆ ಆತ ಹೊಂದಿರುವಂತಹ ಬಂದೂಕಿನ ಲೈಸೆನ್ಸ್‌ನ್ನು ತತ್‌ಕ್ಷಣವೇ ಕ್ಯಾನ್ಸಲ್ ಮಾಡಿ, ಆ ಊರಿನಿಂದ ಬಹಳ ದೂರದ ಊರಿಗೆ ವರ್ಗ ಮಾಡಬೇಕು. ಏಕೆಂದರೆ ಸುಮಾರು 15 ವರ್ಷದಿಂದಲೂ ಆ ಶಿಕ್ಷಕ ಅದೇ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದಾನೆ. ಇದರಿಂದಾಗಿ ಆತ ಅಲ್ಲಿ ಬೇರು ಬಿಟ್ಟು ಜನಗಳಿಗೆ ಸಾಕಷ್ಟು ತೊಂದರೆ ಕೊಡುವಂತಹ ಕೆಲಸ ಮಾಡುತ್ತಿದ್ದಾನೆ. ಇದಕ್ಕಿಂತ ಮೊದಲು ಅವನನ್ನು ವರ್ಗಾವಣೆ ಮಾಡಿಸುವುದಕ್ಕೆ ಪ್ರಯತ್ನ ಪಟ್ಟರು ಇದು ಸಾಧ್ಯವಾಗಿಲ್ಲ. ಏಕೆಂದರೆ ರಾಜಕೀಯವಾಗಿ ಬಹಳ ಪ್ರಬಲವಾಗಿ ಆ ವ್ಯಕ್ತಿ ಇದ್ದಾನೆ.

ಅಧ್ಯಕ್ಷರು: ಬೇಡ ಅದನ್ನು ಅಲ್ಲಿ ನಿಲ್ಲಿಸಬೇಡಿ, ನಿಮ್ಮ ಸಮಸ್ಯೆಯನ್ನು ಹೇಳಿದೀರಿ, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು): ಅಧ್ಯಕ್ಷರೆ, ಮಾನ್ಯ ಮಿತ್ರರು ಏನು ಹೇಳಿದ್ದಾರೆ ಅದು ನಿಜ. ಆ ಭಾಗದ ಊರಿನವರು ಬಂದು ನನ್ನನ್ನು ಭೇಟಿ ಮಾಡಿ ಆ ಶಿಕ್ಷಕ ಹಲ್ಲೆ ಮಾಡುತ್ತಿದ್ದಾನೆ ಹಾಗೂ ಶಾಸಕರು ಏನು ಹೇಳಿದರು ಆ ವಿಷಯವನ್ನು ನನ್ನ ಹತ್ತಿರ ಹೇಳಿದರು. ನಾನು ಕೂಡಲೇ ಬಿಜಾಪುರ ಡಿ.ಡಿ.ಪಿ.ಐ.ಗೆ ಆ ಶಿಕ್ಷಕನನ್ನು ಸಸ್ಪೆಂಡ್ ಮಾಡಲು ಹೇಳಿದ್ದೇನೆ. ಹಾಗೂ ಅವನು ಈಗಾಗಲೇ ಸಷ್‌ಪೆನ್‌ಷನಲ್ಲಿ ಇದ್ದಾನೆ. ನಂತರ ಬಂದೂಕು ತೆಗೆದುಕೊಂಡು ಹೊಡೆಯುವುದಕ್ಕೆ ಬಂದಿದ್ದ ಎನ್ನುವುದರ ಬಗ್ಗೆ ಅಲ್ಲಿನ ಎಸ್.ಪಿ.ಗೆ ಕಂಪ್ಲೇಂಟ್ ಮಾಡಿ, ಈ ಬಗ್ಗೆ ಲೈಸನ್ಸ್ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಅವನ ಮೇಲೆ ಸೂಕ್ತ ಕ್ರಮ ಜರುಗಿಸಿ ಎಂದು, ಇದರ ಬಗ್ಗೆ ಮಾಹಿತಿ ಕಳುಹಿಸಿ ಎಂದು ಹೇಳಿದ್ದೇವೆ.

ಅಧ್ಯಕ್ಷರು: ಒಂದು ವೇಳೆ ಆತ ಶಿಕ್ಷಕನಾಗಿದ್ದು, ಬಂದೂಕನ್ನು ತೆಗೆದುಕೊಂಡು ಈ ರೀತಿ ಮಾಡುವುದಾದರೆ ಅದರ ಲೈಸನ್ಸ್ ರದ್ದು ಮಾಡಲು ತಮ್ಮ ಸಹೊದ್ಯೋಗಿಗಳ ಹತ್ತಿರ ಚರ್ಚಿಸಿ....

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕೆಲವು ಸಾರಿ ಏನಾಗುತ್ತದೆ ಎಂದರೆ ಕೆಲವು ಉಪಾಧ್ಯಾಯರುಗಳು ಜಮೀನುಗಳನ್ನು ಹೊಂದಿರುತ್ತಾರೆ. ಆದ್ದರಿಂದ ಅವರಿಗೆ ಬಂದೂಕನ್ನು ತೆಗೆದುಕೊಳ್ಳುವ ಅವಕಾಶವಿದೆ.

ಅಧ್ಯಕ್ಷರು: ಅಲ್ಲಿ ಗನ್ ಲೈಸೆನ್ಸ್ ತೆಗೆದುಕೊಳ್ಳಬಾರದು ಎಂದೇನೂ ಇಲ್ಲ, ಅದನ್ನು ಉಪಧ್ಯಾಯರು ಇಟ್ಟುಕೊಳ್ಳಬಾರದು ಎಂದೇನೂ ಇಲ್ಲ, ಆದರೆ ಅದನ್ನು ತೆಗೆದುಕೊಂಡು ಶಾಲೆಗೆ ಹೋಗಬಾರದು. ಶಾಲೆಗೆ ಗನ್‌ನ್ನು ತೆಗೆದುಕೊಂಡು ಆ ಉಪಾಧ್ಯಾಯ ಹೋಗುತ್ತಿರುವುದರಿಂದ ಅದನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ತಾವು ಅಧಿಕಾರಿಗಳಿಗೆ ಹೇಳಿ ಆ ಗನ್ ಲೈಸನ್ಸ್ ಕ್ಯಾನ್ಸೆಲ್ ಮಾಡಿಸಿ.

(ಈ) ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ಜಿಲ್ಲೆಯನ್ನಾಗಿ ನಾಮಕರಣ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ್): ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ, ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಯಕ್ಷಗಾನ, ಭೂತಾರಾಧನೆ, ಮುಂತಾದವುಗಳಿಗೆ ಹೆಸರಾದ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಇತ್ತೀಚಿಗೆ ವಿಭಜನೆ ಮಾಡಿ ಉಡುಪಿ ಜಿಲ್ಲೆಯನ್ನು ಪ್ರತ್ಯೇಕ ಮಾಡಿದ್ದಾರೆ. ಆ ಭಾಗದ 15 ಜನ ಶಾಸಕರಿದ್ದರೂ ಅವರ ಹತ್ತಿರ ಸಮಾಲೋಚನೆ ಮಾಡದೆ ಈ ಕಾರ್ಯವನ್ನು ಮಾಡಿದ್ದಾರೆ. ನಾನು ಆ ಬಗ್ಗೆ ವಿಚಾರ ಮಾಡಲಿಕ್ಕೆ ಈಗ ಹೋಗುವುದಿಲ್ಲ. ಏಕೆಂದರೆ ಇದು ಮುಗಿಯದ ವಿಚಾರವಾಗಿದೆ. ದೇಶದಲ್ಲಿ ಸುಮಾರು 50 ಲಕ್ಷ ಜನ ತುಳು ಮಾತನಾಡುವ ಮಾತೃಭಾಷೆಯ ಜನರಿದ್ದಾರೆ. ಈಗ ವಿಭಜನೆಯ ನಂತರ ಉತ್ತರ ಕನ್ನಡ, ದಕ್ಷಿಣ ಕನ್ನಡ ಮಧ್ಯದಲ್ಲಿ ಉಡುಪಿ ಜಿಲ್ಲೆಎಂದು ಮಾಡಿಕೊಂಡಿದ್ದಾರೆ. ತುಳುನಾಡಿನ ಇತಿಹಾಸದಂತೆ ಇಲ್ಲಿನ ಜನರು ಪರಶುರಾಮ ಸೃಷ್ಟಿಯ ಇತಿಹಾಸದಲ್ಲಿ ಬೆಳೆದವರು. ವೀರರಾದ ಕೋಟಿ ಚೆನ್ನಯ್ಯ, ಕಾಂತಾತಾರ್, ಬೂದಬಾರ್, ಆಗೋಳ್ ಮಂಜಣ್ಣ, ದೇವ ಪುಂಜ, ದೇಶದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಮಹಿಳೆ ಚೌಟರಾಣಿ, ಉಳ್ಳಾಲದ ಅಬ್ಬಕ್ಕದೇವಿ, ಈ ತುಳುನಾಡಿಗೆ ಹೆಸರನ್ನು ತಂದವರು. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ಈ ತುಳು ಭಾಷೆ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ಭಾಷೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತುಳು ಸಾಹಿತ್ಯ ಅಕಾಡೆಮಿಯನ್ನು ಕೂಡ ರಚಿಸಿ, ಪ್ರೋತ್ಸಾಹ ನೀಡಿದೆ. ತುಳುವರೇ ಅಧಿಕವಾಗಿರುವ ಜನ, ತುಳು ಭಾಷೆಯನ್ನೇ ಹೆಚ್ಚಾಗಿ ಮಾತನಾಡುವ ಜನ, ಅನ್ಯ ಮತದವರೂ ಕೂಡ ತುಳು ಭಾಷೆಯನ್ನು ಬಲ್ಲವರಾಗಿರುವುದರಿಂದ ಮಂಗಳೂರು ಕೇಂದ್ರವಾಗಿರುವ ಈ ಜಿಲ್ಲೆಯಲ್ಲಿ ಈಗ ಮೂರು ಜನ ಸಂಸತ್ ಸದಸ್ಯರಲ್ಲಿ ಇಬ್ಬರು ಸಂಸತ್ ಸದಸ್ಯರು...ವಿಷಯ ಏನೆಂದರೆ 9ಜನರಲ್ಲಿ 8 ಜನ ಎಲ್ಲಾ ತುಳು ಭಾಷೆಯನ್ನು ಮಾತನಾಡುವವರು ಇರುವುದರಿಂದ ಈಗ ಉಳಿದಿರುವುದಕ್ಕೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ತುಳು ಜಿಲ್ಲೆಯನ್ನು ಕೇಳುತ್ತಿಲ್ಲ, ನಾನು ಇಲ್ಲಿ ಸ್ಪಷ್ಟ ಪಡಿಸುವುದೇನೆಂದರೆ, ಈ ದೇಶದ ಸುಮಾರು 50 ಲಕ್ಷ ತುಳು ಭಾಷೆ ಮಾತನಾಡುವ ಜನರ ಭಾಷಾಭಿವೃದ್ಧಿಯ ದೃಷ್ಟಿಯಿಂದ ಈ ಜಿಲ್ಲೆಗೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕು; ಕರ್ನಾಟಕಕ್ಕೆ ಮುಂಚೆ ಮೈಸೂರು ಎಂದು ಹೆಸರಿತ್ತು. ಕನ್ನಡ ಮಾತನಾಡುವವರು ಇದ್ದಾರೆಂದು ಇದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದೆ.